(SRI T. C. SHANTAPPA) were made by the people of the said area for converting the existing Ajjampur-Bukkambudhi road into a State Fund road ?

A.—Sri A. G. RAMACHANDRA RAO (Minister for Law and Education).—Yes.

ಶ್ರೀ ಟಿ. ಸಿ. ಶಾಂತಪ್ಪ.—ಅಜ್ಜಂಪುರ—ಬುಕ್ಕಾಂಬುಧಿ ರಸ್ತೆಯನ್ನು ಸ್ಟೇಟ್ ಫಂಡ್ ರಸ್ತೆಯನ್ನಾಗಿ ಮಾರ್ಪಡಿಸಬೇಕೆಂದು ಎಷ್ಟು ದಿವಸಗಳಿಂದ ಮನವಿಗಳು ಬಂದಿವೆ ?

Sri A. G. RAMACHANDRA RAO.—I want notice.

ಶ್ರೀ ಟಿ. ಸಿ. ಶಾಂತಪ್ಪ.—ಅದನ್ನು ಜಾಗ್ರತೆ ತೆಗೆದುಕೊಳ್ಳುತ್ತೀರಾ ?

Sri A. G. RAMACHANDRA RAO.—We will try.

D. B. Road from hand-post of Gudemaranahalli up to Shivaganga, Magadi Taluk.

Q.—746. Sri S. SIDDAPPA (Magadi).—

Will the Government be pleased to state :—

Whether the conversion of the ten miles District Board road formed from the hand-post of Gudemaranahalli up to Shivaganga in Magadi Taluk into a P. W. road is under their consideration?

A.—Sri A. G. RAMACHANDRA RAO (Minister for Law and Education).—Yes.

ಶ್ರೀ ಎಸ್. ಸಿದ್ದಪ್ಪ.—ನನ್ನ ಪ್ರಶ್ನೆಗೆ ಹೌದು ಎಂದು ಉತ್ತರ ಕೊಟ್ಟಿದ್ದೀರಿ. ಇದಕ್ಕೆ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಲಾಗಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಪರಿಶೀಲನೆಯಲ್ಲಿದೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಸ್. ಸಿದ್ದಪ್ಪ.—ಇದನ್ನು ಮುಂದಿನ ಸಾಲಿನಲ್ಲಿ ಜಾಗ್ರತೆಮಾಡಿಸಿ ಜನಜಾನುವಾರುಗಳಿಗೆ ಸಹಾಯಮಾಡಿಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್—ಅದನ್ನು ಪರಿಶೀಲನೆಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಡಿ. ಎಂ. ಗೋವಿಂದರಾಜು.—ಈ ರಸ್ತೆಯಲ್ಲಿ ನಾಲ್ಕು ಬನ್ನುಗಳು ಓಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಗೊತ್ತಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ನಾಲ್ಕು ವರ್ಷಗಳಿಂದಲೂ ಈ ರಸ್ತೆ ಚೆನ್ನಾಗಿಲ್ಲ. ಅದನ್ನು P. W. D.ಗೆ ಸೇರಿಸಬೇಕೆಂದು ಅನೇಕ ಬೇಳೆ ಕೇಳಿರುವುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಷ್ಟು ಸಲ ಕೇಳಿರುವುದೆಂಬ ವಿಚಾರ ಗೊತ್ತಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಅದಷ್ಟು ಜಾಗ್ರತೆ ಇದನ್ನು ತೆಗೆದುಕೊಳ್ಳುತ್ತೀರಾ ?

Sri A. G. RAMACHANDRA RAO.—Yes.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಜಿಲ್ಲಾಬೋರ್ಡ್ ರಸ್ತೆಗಳನ್ನು ಸ್ಟೇಟ್‌ಫಂಡ್ ರಸ್ತೆಯಾಗಿ ತೆಗೆದುಕೊಳ್ಳುವ ಸಲಹೆ ಸಂಬಂಧದಲ್ಲಿ ಎಲ್ಲ ರಸ್ತೆಗಳನ್ನೂ ತೆಗೆದುಕೊಂಡು ಸಮಗ್ರವಾಗಿ ಯೋಚಿಸುವುದು ಸೂಕ್ತವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಅದನ್ನೇ ಮಾಡುತ್ತಿದ್ದೇವೆ.

ಶ್ರೀ ಕೆ. ಪ್ರಭಾಕರ್.—ಎಲ್ಲ ರಸ್ತೆಗಳ ವಿಷಯವನ್ನು ತಾವು ಪರ್ಯಾಲೋಚಿಸುವವರೆಗೂ ಈ ಚೋಟಾ ರಸ್ತೆಯನ್ನು P.W.D. ರಸ್ತೆಯಾಗಿ ಮಾಡುವುದಕ್ಕಾಗುವುದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲೆಲ್ಲಿ ಸಾಧ್ಯವೋ ಅವನ್ನು ಮಾಡುತ್ತೇವೆ. ಒಟ್ಟಿಗೆ ಸಮಗ್ರವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ. ರಾಚಯ್ಯ.—ಜಿಲ್ಲಾಬೋರ್ಡಿನಿಂದ ಒಂದು ಲಿಸ್ಟ್ ತರಿಸಿಕೊಂಡು ಎಲ್ಲವನ್ನೂ ಸರ್ಕಾರದ ನೇರವಾದ ಆಡಳಿತಕ್ಕೆ ತೆಗೆದುಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—1953ನೆ ಇಸವಿಯಲ್ಲಿ ಅನೇಕ ಜಿಲ್ಲಾಬೋರ್ಡು ರಸ್ತೆಗಳನ್ನು ಸ್ಟೇಟ್ ಫಂಡ್ ರಸ್ತೆಗಳನ್ನಾಗಿ ಪರಿವರ್ತಿಸಲಾಯಿತು. ಅನಂತರವೂ ಕೂಡ ಅನೇಕ ಕಡೆಗಳಿಂದ ಜಿಲ್ಲಾಬೋರ್ಡ್ ರಸ್ತೆಗಳು ಮತ್ತು I.V.C. ರಸ್ತೆಗಳು ಇವನ್ನೂ ಸ್ಟೇಟ್‌ಫಂಡ್ ರಸ್ತೆಗಳನ್ನಾಗಿ ಮಾಡಬೇಕೆಂದು ಮನವಿಗಳು ಬರುತ್ತಲೇ ಇವೆ. ಇದು ಹಣಕಾಸಿನ ಪ್ರಶ್ನೆಗೆ ಸಂಬಂಧಪಟ್ಟದ್ದು. ಮೊದಲು 35 ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಖರ್ಚುಮಾಡುತ್ತಿದ್ದೆವು. ಈಗ ಸ್ಟೇಟ್ ಫಂಡ್ ರಸ್ತೆಗಳನ್ನು maintain ಮಾಡುವುದಕ್ಕೆ ಸುಮಾರು 85 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಎಲ್ಲ ರಸ್ತೆಗಳನ್ನೂ ಸರ್ಕಾರದವರೇ ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕಾದ್ದು, ಕರ್ತವ್ಯ; ನಿಜ. ಆದರೆ ಹಣವನ್ನು ಎಲ್ಲಿಂದ ತರುವುದು ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಬಿ. ರಾಚಯ್ಯ.—ಜಿಲ್ಲಾಬೋರ್ಡಿನ ಅಧಿಕಾರ ವ್ಯಾಪ್ತಿಯನ್ನು ಸ್ಟೇಟ್‌ಫಂಡಿಗೆ ಸಂಬಂಧಪಟ್ಟುದಕ್ಕೆ ವಹಿಸಬೇಕೆಂದು ಶಿಫಾರ್ಸುಮಾಡಿದಮೇಲೆ ಜಿಲ್ಲಾಬೋರ್ಡಿನವರು ಸಾಲಾಬಾದು ಕಾಂಗಾರಿ ಮಾಡಿಸದೆ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಜಿಲ್ಲಾಬೋರ್ಡಿನವರು ತಮ್ಮ ಶಕ್ತ್ಯಾನುಸಾರ ಅವರ ರಸ್ತೆಗಳನ್ನು ಮೈನ್‌ಟೈನ್ ಮಾಡುತ್ತಿದ್ದಾರೆ.